## ಯಾರ ಕೊಲೆ ?

---

*ಹುಡುಗ ಮತ್ತು ಹುಡುಗಿ ಕೈಕೈ ಹಿಡಿದು ಮಾತಾಡುತ್ತಾ ಬರುತ್ತಿದ್ದಾರೆ.*
*ನಡುನಡುವೆ ಹುಡುಗ ಭಯದಿಂದ ಹಿಂದೆ ತಿರುಗಿ ನೋಡುತ್ತಿದ್ದಾನೆ.*
*ಹುಡುಗಿ ಮಾತ್ರ ಹುಡುಗನ ಜತೆ ಮಾತಿನಲ್ಲಿ ಮುಳುಗಿಹೋಗಿದ್ದಾಳೆ.*

ಹುಡುಗ:

ನೀನು ಯಾವಾಗಲೂ ಹೀಗೆ ಎಡೆಬಿಡದೆ ಮಾತಾಡುತ್ತಲೇ ಇರುತ್ತೀಯ? ಬ್ರೇಕೇ ಇಲ್ಲವ?

ಹುಡುಗಿ:

(ತುಸು ಅವಕ್ಕಾಗಿ ಹುಡುಗನನ್ನು ನೋಡಿ)

ನಾನು ಮಾತಾಡುವುದು ನಿನಗೆ ಇಷ್ಟ ಇಲ್ಲವ? ಇಲ್ಲದಿದ್ದರೆ ಹೇಳು ತುಟಿಗೆ ಹೊಲಿಗೆ ಹಾಕಿಕೊಳ್ಳುತ್ತೇನೆ. ಏನೆಂದರೂ ಮಾತಾಡುವುದಿಲ್ಲ!

ಹುಡುಗ:

ಛೆ! ನಿನ್ನ ಮಾತುಕತೆ ಒಡನಾಟ ನನಗೆ ಇಷ್ಟವಿಲ್ಲ ಅಂದನ? ಹಾಗೇನಿಲ್ಲ ಆದರೆ...

(ಮತ್ತೆ ಹಿಂದೆ ತಿರುಗಿ ನೋಡುತ್ತಾನೆ)

ಹುಡುಗಿ:

ಏನು ಆದರೆ? ಇಷ್ಟ ಆದರೆ... ಕಡಿಮೆ ಇಷ್ಟ ಅಂತೀಯ?

ಹುಡುಗ:

ಇಲ್ಲ, ಮಾರಾಯ್ತಿ! ಯಾಕೋ ನನಗೆ ಕೊಂಚ ಹೆದರಿಕೆ ಆಯಿತು. ಯಾರೋ ನಮ್ಮನ್ನು ಬೆನ್ನತ್ತಿ ಬರ್ತಾ ಇದ್ದಾರೆ ಅನ್ನಿಸ್ತು. ಅದಕ್ಕೆ...

ಹುಡುಗಿ:

(ತೀರ ಗಾಭರಿಯಿಂದ)

ಹೌದು? ಯಾರ? ಎಲ್ಲಿ? ಬಾ ಓಡಿಹೋಗೋಣ... ಇಷ್ಟು ಹೊತ್ತು ಯಾಕೆ ಹೇಳಲಿಲ್ಲ? ಒಳ್ಳೇ ಪೆದ್ದನ ಸಹವಾಸ ಆಯಿತು...

ಹುಡುಗ:

ಇಲ್ಲ ಕಣೇ... ಸುಮ್ನೆ ಹಾಗನ್ನಿಸ್ತು ಅಷ್ಟೆ! ಅಲ್ಲಿ ನೋಡು ದೂರದಲ್ಲಿ ಇಬ್ಬರು ನಿಂತಿದ್ದಾರಲ್ಲ...

*ಎನ್ನುವಷ್ಟರಲ್ಲಿ ಇವರ ಹತ್ತಿರಕ್ಕೆ ಯಾರೋ ಇಬ್ಬರು ಓಡಿಬರುತ್ತಾರೆ.*
*ಹುಡುಗಿ ಹೆದರಿಕೆಯಿಂದ ಹುಡುಗನ ತೋಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾಳೆ. ಒಬ್ಬ ಜೋರಾಗಿ ಕೂಗುತ್ತಾ ಇವರ ಎದುರಿನಲ್ಲೇ ಮುಖ ನೆಲಕ್ಕೆ ಹಾಕಿ ಬೀಳುತ್ತಾನೆ. ಅವನ ಬೆನ್ನಿಗೆ ಚೂರಿ ಇರಿದಿದೆ.*

ಹುಡುಗಿ:

ಅಯ್ಯೋ! ರಕ್ತಾ!

(ಹುಡುಗ ಥಟ್ಟನೆ ಅವಳ ಬಾಯಿ ಮುಚ್ಚುತ್ತಾನೆ)

ಹುಡುಗ:

(ಪಿಸುದನಿಯಲ್ಲಿ)

ಕೂಗಬೇಡ! ಅವನು ನನ್ನ ಫ್ರೆಂಡು!

*ಹುಡುಗಿ ಬಿಟ್ಟ ಕಣ್ಣು ಬಿಟ್ಟಂತೆ ಹುಡುಗನ್ನು ನೋಡುತ್ತಾಳೆ. ಹುಡುಗ ಮೆಲ್ಲನೆ ಅವಳ ಬಾಯಿಂದ ಕೈತೆಗೆಯುತ್ತಾನೆ.*